**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ**

**ನ್ಯಾಯಾಲಯ ಆಳಂದ**

ಸಿ.ಸಿ. ನಂಬರ 242/2014 ಸಿ.ಡಬ್ಲೂ. **4** ಪಿ.ಡಬ್ಲೂ. **8**

ದಿನಾಂಕಃ 02.04.2026

---

ಸತ್ಯ ಪ್ರತಿಜ್ಞೆಯ ಮೇರೆಗೆ

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎ ಕೆ ವಕೀಲರಿಂದಃ

ನನಗೆ ಘಟನೆಯ ಬಗ್ಗೆ ವಿಷಯ ತಿಳಿಸಿದ 5 ನಿಮಿಷಗಳ ನಂತರ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಘಟನೆಯನ್ನು 10 ರಿಂದ 20 ಫೀಟ್ ಅಂತರದಲ್ಲಿ ನೋಡಿರುತ್ತೇನೆ. ಘಟನೆಯಲ್ಲಿ ಉಪಯೋಗಿಸಿದ ಕಲ್ಲು ಕಪ್ಪು ಬಣ್ಣದ್ದು ಇತ್ತು. ಸದರಿ ಕಲ್ಲು ಚೂಪಾಗಿ ಮತ್ತು ಚೌಕಾರದಲ್ಲಿ ಇತ್ತು. ಸದರಿ ಕಲ್ಲು ಒಂದು ಕೈಯಲ್ಲಿ ಹಿಡಿಯಲು ಬರುವುದಕ್ಕಿಂತ ಸ್ವಲ್ಪ ದೊಡ್ಡದ್ದು ಇತ್ತು. ಕಟ್ಟಿಗೆ ಮೇಳೆ ಹೊಸದಾಗಿ ಇತ್ತು. ಘಟನೆಯ ನಂತರ ನನ್ನ ತಂದೆಯನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿರುತ್ತೇನೆ. ಈ ಪ್ರಕರಣವನ್ನು ದಾಖಲಿಸುವುದಕ್ಕಿಂತ ಮುಂಚೆ ಆರೋಪಿತರು ನನ್ನ ತಂದೆಯ ವಿರುದ್ದ ಪ್ರಕರಣವನ್ನು ದಾಖಲಿಸಲು ಪೋಲಿಸ್ ಠಾಣೆಗೆ ಹೋದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿತರು ನನ್ನ ತಂದೆಯ ವಿರುದ್ದ ಪ್ರಕರಣವನ್ನು ದಾಖಲಿಸಿದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಆರೋಪಿತರು ನನ್ನ ತಂದೆಯ ಮೇಲೆ ಪ್ರಕರಣವನ್ನು ದಾಖಲಿಸಿದ ಕಾರಣ ನಾವೂ ಸಹ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸಾಕ್ಷಿಯು ಅವರು ಒಂದು ಪ್ರಕರಣವನ್ನು ಸಲ್ಲಿಸಿದ್ದು ನಾವು ಒಂದು ಪ್ರಕರಣವನ್ನು ಸಲ್ಲಿಸಿರುತ್ತೇವೆ. ಆರೋಪಿತರು ನನ್ನ ತಂದೆಯ ವಿರುದ್ದ ಪ್ರಕರಣ ಸಲ್ಲಿಸಿದ ಕಾರಣಕ್ಕಾಗಿ ನನ್ನ ತಂದೆಯು ಆರೋಪಿತರ ವಿರುದ್ದ ಪ್ರಕರಣ ಸಲ್ಲಿಸಿರುತ್ತಾರೆ ಎಂದರೆ ಸರಿ. ಚಾಸಾ 1 ರವರು ತಂದೆ ಆದ ಕಾರಣ ಅವರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಆರೋಪಿತರು ಚಾಸಾ 1 ರವರಿಗೆ ಹೊಡೆ ಬಡೆ ಮಾಡಿರುವುದಿಲ್ಲ, ಚಾಸಾ 1 ರವರು ಹಳೆಯ ದ್ವೇಷದ ಕಾರಣ ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯು ಅವರ ವಿರುದ್ದ ಮಾಡಿದ ಪ್ರಕರಣದಲ್ಲಿ ತಪ್ಪಿಸಿಕೊಳ್ಳುವ ಸಲುವಾಗಿ ಈ ಒಂದು ಸುಳ್ಳು ಪ್ರಕರಣವನ್ನು

ಆರೋಪಿತರ ವಿರುದ್ದ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಚಾಸಾ 1 ರವರ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು 8 ವರ್ಷಗಳ ಹಿಂದೆ ನನ್ನ ತಂದೆಗೆ ಕಲ್ಲು ಮತ್ತು ಬಡಿಗೆಗಳಿಂದ ಹೊಡೆಯುತ್ತಿದ್ದರು ನಾನು ಬಿಡಿಸಲು ಹೋಗಿದ್ದೇನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲಃ</u>**

ಓ.ಹೇ.ಕೆ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ಆಳಂದ